ಅಧ್ಯಕ್ಷರು.—ಸಂಬಂಧಪಟ್ಟ ಮಂತ್ರಿಗಳು ಇಲ್ಲ. ಮುಂದೆ ತೆಗೆದುಕೊಳ್ಳೋಣ.

ಚುಕ್ಕೆ ಪ್ರಶ್ನೆ ೫೪೪—ಶ್ರೀ ಪುಲ್ಲಿಕಯ್ಯ ಗುತ್ತೇದಾರ್.—ಸದಸ್ಯರು ಗೈರು ಹಾಜರಿ.

ಚುಕ್ಕೆ ಪ್ರಶ್ನೆ ೪೬—ಶ್ರೀ ಮಲ್ಲಿಕಾರ್ಜುನ ಖೂರ್ಗೆ.—ಮಾನ್ಯ ಸದಸ್ಯರು ಗೈರುಹಾಜರಿ.

ಚುಕ್ಕೆ ಪ್ರಶ್ನೆ ೪೭೦—ಶ್ರೀ ಬಿ.ಐ.ಪಾಟೀಲ್.—ಮಾನ್ಯ ಸದಸ್ಯರು ಗೈರುಹಾಜರಿ.

ಚುಕ್ಕೆ ಪ್ರಶ್ನೆ ೫೩೩—ಶ್ರೀ ಜಿ.ಎಂ. ಕಾನಡೆ.—ಮಾನ್ಯ ಸದಸ್ಯರು ಗೈರು ಹಾಜರಿ.

ಚುಕ್ಕೆ ಪ್ರಶ್ನೆ ೬೮—ಶ್ರೀ ಜ್ಞಾನದೇವ ದೊಡ್ಡಮೇಟಿ.—ಮಾನ್ಯ ಸದಸ್ಯರು ಗೈರುಹಾಜರಿ.

ಚುಕ್ಕೆ ಪ್ರಶ್ನೆ ೫೬—ಶ್ರೀ ಕೆ.ಎಚ್. ಶ್ರೀನಿವಾಸ್.—ಮಾನ್ಯ ಸದಸ್ಯರು ಗೈರುಹಾಜರಿ.

ಚುಕ್ಕೆ ಪ್ರಶ್ನೆ ೧—ಶ್ರೀ ಕೆ.ಎಚ್. ಪಾಟೀಲ್.—ಮಾನ್ಯ ಸದಸ್ಯರು ಗೈರುಹಾಜರಿ.

ಚುಕ್ಕೆ ಪ್ರಶ್ನೆ ೪೧೬—ಶ್ರೀ ಆರ್. ರಾಮಯ್ಯ.—ಮಾನ್ಯ ಸದಸ್ಯರು ಗೈರುಹಾಜರಿ.

ಚುಕ್ಕೆ ಪ್ರಶ್ನೆ ೪೯೯—ಶ್ರೀ ಜಿ.ಎಸ್. ಶಿವನಂಜಪ್ಪ.—ಸದಸ್ಯರು ಗೈರುಹಾಜರಿ.

ಚುಕ್ಕೆ ಪ್ರಶ್ನೆ ೪೭೮—ಶ್ರೀ ಪಿ.ಪಿ. ಮೂಡಲಗಿರಿಯಪ್ಪ.—ಸದಸ್ಯರು ಗೈರುಹಾಜರಿ.

ಚುಕ್ಕೆ ಪ್ರಶ್ನೆ ೫೦೫—ಶ್ರೀ ಬಸವರಾಜ ಪಾಟೀಲ್.—ಮಾನ್ಯ ಸದಸ್ಯರು ಗೈರುಹಾಜರಿ

ಚುಕ್ಕೆ ಪ್ರಶ್ನೆ ೫೨೬—ಶ್ರೀ ಪಟಮಕ್ಕಿ ರತ್ನಾಕರ್.—ಮಾನ್ಯ ಸದಸ್ಯರು ಗೈರುಹಾಜರಿ.

ಚುಕ್ಕೆ ಪ್ರಶ್ನೆ ೨೮೦—ಶ್ರೀ ಬಿ.ಎಸ್. ಯಡಿಯೂರಪ್ಪ

ಶ್ರೀ ವಸಂತ ಬಂಗೇರ.—ಮಾನ್ಯ ಸದಸ್ಯರ ಪರವಾಗಿ ನಾನು ಪ್ರಶ್ನೆಯನ್ನು ಕೇಳುತ್ತೇನೆ.

ಅಧ್ಯಕ್ಷರು.—ಮಾನ್ಯ ಕಂದಾಯ ಮಂತ್ರಿಗಳು ಸಭೆಗೆ ಬಂದಿಲ್ಲ. ಆದ್ದರಿಂದ ಇದನ್ನು ಮುಂದೂಡಿದ್ದೇನೆ.

ಚುಕ್ಕೆ ಪ್ರಶ್ನೆ ೧೩೧—ಶ್ರೀಪತಿ ಮುಖ್ತಿರುನ್ನಿಸಾ.—ಮಾನ್ಯ ಸದಸ್ಯರು ಗೈರುಹಾಜರಿ.

ಚುಕ್ಕೆ ಪ್ರಶ್ನೆ ೨೮೧—ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಮಾನ್ಯ ಸದಸ್ಯರು ಗೈರು-ಹಾಜರಿ.

ಚುಕ್ಕೆ ಪ್ರಶ್ನೆ ೬೭೦—ಶ್ರೀ ಕೆ. ಕುಶಾಲ.—ಮಾನ್ಯ ಸದಸ್ಯರು ಗೈರುಹಾಜರಿ.

ಚುಕ್ಕೆ ಪ್ರಶ್ನೆ ೬೭೫—ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ—ಮಾನ್ಯ ಸದಸ್ಯರು ಗೈರುಹಾಜರಿ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪಶ್ನೋತ್ತರಗಳು

REGULARISATION OF LANDS RESPECT OF LANDLESS AGRICULTURISTS IN THE STATE.

266 (675) SRI LAKAPPA (Chikanayakanahalli) will the Minister for Revenue and Planning be Pleased to state .—

Whether Government will take action regarding grant of land by way of regularisation to the landless agriculturists in the State who are unauthorisedly cultivating the same from the last three years ?

SRI S. R. BOMMAI (Minister for Revenueand Planing).—

Regularisation of unauthorised culuivation of Government land by way of grant to eligible unauthorised cultivators is under active consideration of Government.

ರೋಣ ತಾಲ್ಲೂಕಿನ ನರೇಗಲ್ಲಿನಲ್ಲಿ ವಿದ್ಯುತ್ ಇಲಾಖೆಯ ಲೆಕ್ಕ ಪತ್ರ ಕಚೇರಿ (ಅಕೌಂಟ್ಸ್ ಆಫೀಸ್) ಪ್ರಾರಂಭಿಸುವ ಬಗ್ಗೆ

೨೭೨ (೮೮) ಶ್ರೀ ಜ್ಞಾನದೇವ ದೊಡ್ಡಮೇಟಿ (ರೋಣ) ಮಾನ್ಯ ವಿದ್ಯುತ್ ಮತ್ತು ಭೂಗರ್ಭ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ.—

ಅ) ರೋಣ ತಾಲ್ಲೂಕು ನರೇಗಲ್ಲಿನಲ್ಲಿ ವಿದ್ಯುತ್ ಇಲಾಖೆಯ ಲೆಕ್ಕಪತ್ರ ಶಾಖೆ (ಅಕೌಂಟ್ಸ್ ಆಫೀಸ್) ಎಲ್ಲಿಯವರೆಗೆ ಕೆಲಸ ಮಾಡುತ್ತಿತ್ತು ?

ಆ) ನರೇಗಲಿನಿಂದ ಸದರಿ ಲೆಕ್ಕಪತ್ರ ಶಾಖೆಯನ್ನು (ಅಕೌಂಟ್ಸ್ ಆಫೀಸ್) ವರ್ಗಾಯಿಸಿರುವುದರಿಂದ ನರೇಗಲ್ಲ ಭಾಗದ ರೈತರಿಗೆ ಹಾಗೂ ಗೃಹ ಬಳಕೆದಾರರಿಗೆ ತೊಂದರೆಯಾಗಿರುವುದು ಸರಕಾರದ ಗಮನಕ್ಕೆ ಬಂದಿದೆಯೆ ?

ಇ) ಹಾಗಿದ್ದಲ್ಲಿ ನರೇಗಲ್ಲಿನಲ್ಲಿ ಲೆಕ್ಕಪತ್ರ ಶಾಖೆಯನ್ನು ಪುನಃ ಪ್ರಾರಂಭಿಸುವ ಯೋಚನೆ ಸರಕಾರಕ್ಕಿದೆಯೆ ?

ಈ) ಹಾಗಿದ್ದಲ್ಲಿ, ಯಾವಾಗ ಲೆಕ್ಕಪತ್ರ ಶಾಖೆಯನ್ನು ಪುನಃ ಪ್ರಾರಂಭಿಸಲಾಗುವುದು?

ಶ್ರೀ ಜೆ. ಎಸ್. ದೇಶ್‌ಮುಖ್ (ವಿದ್ಯುತ್ ಗಣಿ ಮತ್ತು ಭೂಗರ್ಭ ಮಂತ್ರಿಗಳು).—

ಅ) ನರೇಗಲ್ಲಿನಲ್ಲಿ ಮಂಡಳಿಯ ಲೆಕ್ಕಪತ್ರ ಶಾಖೆಯು ಮೇ ತಿಂಗಳು ೧೯೭೫ರ ವರೆಗೆ ಕೆಲಸ ಮಾಡುತ್ತಿತ್ತು.

ಆ) ಹೌದು. ಆದರೂ ನರೇಗಲ್ಲಿನ ಭಾಗದ ರೈತರಿಗೆ ಮತ್ತು ಗೃಹ ವಿದ್ಯುತ್ ಬಳಕೆದಾರರಿಗೆ ಹಣಪಾವತಿ ಮಾಡಲು ತೊಂದರೆ ಆಗದಂತೆ ನರೇಗಲ್ಲಿನಲ್ಲಿ ದಿನವೂ ಹಣ ಪಡೆಯುವ ವ್ಯವಸ್ಥೆ ಇದೆ ಮತ್ತು ಈ ಭಾಗದ ಲೆಕ್ಕಪತ್ರಗಳನ್ನು ಹತ್ತಿರದ ಗಜೇಂದ್ರಗಡ ಶಾಖೆಯಲ್ಲಿಡಲಾಗಿದೆ.

ಇ) ಈ ಬಗ್ಗೆ ಹಲವು ಅರ್ಜಿಗಳು ವಿದ್ಯುಚ್ಛಕ್ತಿ ಮಂಡಳಿಗೆ ಬಂದಿದ್ದು ಈ ವಿಚಾರ ಮಂಡಳಿಯ ಪರಿಶೀಲನೆಯಲ್ಲಿದೆ.

ಈ) ಈ ಶಾಖೆಯ ಪುನಃ ಪ್ರಾರಂಭಕ್ಕೆ ಬೇಕಾದ ವಿವರಗಳನ್ನು ಮಂಡಳಿಯು ಸಂಗ್ರಹಿಸುತ್ತಿದೆ. ಅಲ್ಲದೆ ಕೆಲಸದ ಒತ್ತಡ ಜಾಸ್ತಿಯಾಗಿ ಲೆಕ್ಕಪತ್ರ ವಿಭಾಗವನ್ನು ತೆಗೆಯುವ ಅವಶ್ಯಕತೆ ಬಿದ್ದರೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಸಂಪನ್ಮೂಲಗಳನ್ನು ಅನುಸರಿಸಿ ಸೂಕ್ತ ಕ್ರಮವನ್ನು ಕೈಗೊಳ್ಳಲಾಗುವುದು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಂದ ಮಾರಲ್ಪಟ್ಟ ಜಮೀನುಗಳನ್ನು ವಾಪಸ್ಸು ಕೊಡಿಸುವ ಬಗ್ಗೆ

೨೭೩ (೩೬) ಶ್ರೀ ಕೆ. ಹೆಚ್. ಶ್ರೀನಿವಾಸ್ (ಶಿವಮೊಗ್ಗ) ಮಾನ್ಯ ಕಂದಾಯ ಮತ್ತು ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ.—

ಅ) ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ (ಕೆಲವು ಜಮೀನು ಪರಭಾರೆ: ನಿಷೇದ) ಕಾಯಿದೆ ೧೯೭೮ರ ಪರಿಮಿತಿಯೊಳಗಡೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಎಷ್ಟು ಜನರಿಗೆ ಅವರು ಪರಭಾರೆ ಮಾಡಿದ ಜಮೀನನ್ನು ಹಿಂತಿರುಗಿಸಲಾಗಿದೆ.

ಆ) ಮರು ಮಂಜೂರಾತಿ ವಿಸ್ತೀರ್ಣ.